ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಚಿಂತಾಮಣಿಗೆ ಸೇರಿದ ಮುರುಗಮಲ್ಲ ಹೋಬಳಿ ಪಾತಲೋಟಿ ಗ್ರಾಮದ ಮನೆಗಳ ಮೇಲೆ ಹೈಟೆನಷನ್ ವಿದ್ಯುತ್ ಲೈನ್ ಇರುವುದಿಲ್ಲ. ಅಲ್ಲಿರುವ ವಿದ್ಯುತ್ ಲೈನ್ ಲೋಟೆನ್‌ಷನ್ ಆಗಿರುತ್ತದೆ. ಈ ಲೈನ್ ಕೆಳಗೆ ವಾಸಿಸುವ ಮೂರು ಮನೆಯವರಿಗೆ ಆಗುತ್ತಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ಲೋಟೆನ್‌ಷನ್ (ಎಲ್.ಟಿ.) ವಿದ್ಯುತ್ ಲೈನ್ ಬಹಳ ವರ್ಷಗಳ ಹಿಂದೆ ನಿರ್ಮಿಸಿದ್ದು ತದನಂತರದಲ್ಲಿ ಆ ಲೈನ್ ಕೆಳಗಡೆ ಮೂರು ಕುಟುಂಬದವರು ಮನೆಗಳನ್ನು ಕಟ್ಟಿರುತ್ತಾರೆ. ಸದರಿ ಮನೆಗಳಲ್ಲಿ ವಾಸಿಸುತ್ತಿರುವ ಮನೆ ಮಾಲೀಕರು ತಮ್ಮ ಮನೆಯ ಮೇಲೆ ಇರುವ ಎಲ್.ಟಿ.ಲೈನನ್ನು ಸ್ಥಳಾಂತರಿಸಲು ಮನವಿ ಮಾಡಿರುತ್ತಾರೆ. ಆದರೆ ಹಾಲಿ ಇರುವ ಲೋಟೆನ್‌ಷನ್ ಲೈನ್ ಮನೆ ಕಟ್ಟುವ ಮೊದಲೇ ನಿರ್ಮಾಣವಾಗಿರುವುದರಿಂದ ಲೈನನ್ನು ಸ್ಥಳಾಂತರಿಸಲು ಬೇಕಾಗುವ ವೆಚ್ಚವನ್ನು ಕಾಯ್ದೆ ಪ್ರಕಾರ ಸಂಬಂಧಪಟ್ಟವರು ಭರಿಸಬೇಕಾಗುತ್ತದೆ. ಆಗಲೇ ಲೈನ್‌ನ್ನು ಸ್ಥಳಾಂತರಿಸಲಾಗುವುದು. ಈ ವಿಷಯವನ್ನು ಸದರಿ ಮನೆ ಮಾಲೀಕರಿಗೆ ತಿಳಿಸಲಾಗಿದೆ.

ಇ) ಹಣ ಪಾವತಿ ಮಾಡಿದ ನಂತರ ಲೈನನ್ನು ಸ್ಥಳಾಂತರಿಸುವ ಬಗ್ಗೆ ಕ್ರಮ ತೆಗೆದು ಕೊಳ್ಳಲಾಗುವುದು.

ಚಿಂತಾಮಣಿ ಕ್ಷೇತ್ರದ ಚಾಕ್‌ವೇಲ್ ಗ್ರಾಮದಲ್ಲಿ ಪವರ್ ಸ್ಟೇಷನ್ ನಿರ್ಮಾಣ

1330 (875) ಶ್ರೀ ಚೌಡ ರೆಡ್ಡಿ (ಚಿಂತಾಮಣಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರದ ಚಾಕ್‌ವೇಲ್ ಗ್ರಾಮದಲ್ಲಿ ಹೊಸದಾಗಿ ಪವರ್ ಸ್ಟೇಷನ್ ಮಂಜೂರಾಗಿದ್ದು, ಇದರ ನಿರ್ಮಾಣವನ್ನು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ ಮತ್ತು ಎಷ್ಟು ದಿನಗಳೊಳಗಾಗಿ ನಿರ್ಮಾಣ ಕಾರ್ಯ ಪೂರೈಸಲು ಷರತ್ತು ವಿಧಿಸಲಾಗಿದೆ;

ಆ) ಈ ವಿದ್ಯುತ್ ಸ್ಥಾವರದ ನಿರ್ಮಾಣ ಕಾರ್ಯ ವಿಳಂಬವಾಗಿರುವುದರಿಂದ, ರೈತರು ಮತ್ತು ಸಾರ್ವಜನಿಕರು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಬಸವರಾಜಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಚಿಂತಾಮಣಿ ಕ್ಷೇತ್ರದ ಚಾಕ್‌ವೇಲ್ ಗ್ರಾಮದಲ್ಲಿ ಹೊಸ 66/11 ಕೆ.ವಿ.ಸಬ್ ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ಚಿ: ಬಿ.ಎಸ್.ಇ. ಎಸ್. ಸಂಸ್ಥೆಗೆ ವಹಿಸಲಾಗಿದೆ. ಈ ನಿರ್ಮಾಣ ಕಾರ್ಯವನ್ನು ಮಾರ್ಚ್ 2003ರ ಅಂತ್ಯದೊಳಗೆ ಪೂರ್ಣಗೊಳಿಸಲು ಷರತ್ತು ವಿಧಿಸಲಾಗಿದೆ.

ಆ) ಇ) ಈ ಕಾಮಗಾರಿಗೆ ಸಂಬಂಧಪಟ್ಟಂತೆ ಎಲ್ಲಾ ಕೆಲಸಗಳು ಈಗ ಮುಕ್ತಾಯಗೊಳ್ಳುತ್ತಿದ್ದು, ಮಾರ್ಚ್ 2003ರ ಅಂತ್ಯದೊಳಗೆ ಈ ವಿದ್ಯುತ್ ಸ್ಥಾವರವನ್ನು ಚಾಲನೆಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಆನ್‌ಲೈನ್‌ಲಾಟರಿಯಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ

1331 (1977) ಶ್ರೀ ದಿನೇಶ್ ಗುಂಡುರಾವ್ (ಗಾಂಧಿ ನಗರ): ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಆನ್‌ಲೈನ್ ಲಾಟರಿಗಳಿವೆ; ಯಾವುವು;

ಆ) ಕರ್ನಾಟಕ ಸರ್ಕಾರದ ಸ್ವಾಮ್ಯದ ಹೊರತಾದ ಕೆಲವು ಆನ್‌ಲೈನ್ ಲಾಟರಿಯವರು ಇದುವರೆಗೂ ಒಂದೂ ಬಂಪರ್ ಡ್ರಾ ಮಾಡದೆ ಜನರಿಗೆ ಮೋಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಆನ್‌ಲೈನ್ ಲಾಟರಿಯಿಂದ ಪ್ರತಿದಿನ ರಾಜ್ಯ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು; (ಕಂಪನಿವಾರು ವಿವರ ನೀಡುವುದು);

ಈ) ಈ ಆನ್‌ಲೈನ್ ಲಾಟರಿಯನ್ನು ನಡೆಸುವುದು ಸರ್ಕಾರಕ್ಕೆ ಅನಿವಾರ್ಯವೆ; ಹಾಗಿಲ್ಲದಿದ್ದಲ್ಲಿ ಈ ಆದಾಯದ ಹಣವನ್ನು ಆನ್ ಲೈನ್ ಲಾಟರಿ ಹೊರತಾಗಿ ಬೇರೆ ಮೂಲಗಳಿಂದ ಸಂಗ್ರಹಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಬಾಬುರಾವ್ ಬಸವಣ್ಣ ಚಿಂಚನ್ಸೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು) :

ಅ) ಫ್ಲೇವಿನ್ ಹಾಗೂ ಸ್ಮಾರ್ಟ್‌ವಿನ್ ಎಂಬ ಎರಡು ಸಂಸ್ಥೆಗಳು ಆನ್‌ಲೈನ್ ಲಾಟರಿ ನಡೆಸುತ್ತಿವೆ.

ಆ) ಇಲ್ಲ

ಇ) ಕರ್ನಾಟಕ ರಾಜ್ಯದ ಲಕ್ಕಿ 3 ಪ್ರತಿದಿನ ನಿವ್ವಳ ಆದಾಯ ರೂ. 21 ಲಕ್ಷದಿಂದ 31.5 ಲಕ್ಷಗಳವರೆಗೆ ಬರುತ್ತಿದೆ. ಇತರ ರಾಜ್ಯದ ಆನ್‌ಲೈನ್ ಲಾಟರಿಗಳಿಂದ ಮಾರಾಟಕರ ರೂಪದಲ್ಲಿ 2001-2002 ನೇ ಸಾಲಿನಲ್ಲಿ ರೂ. 49.88 ಲಕ್ಷ ಆದಾಯ ಬಂದಿದೆ.

ಈ) ಆನ್‌ಲೈನ್ ಲಾಟರಿ ನಡೆಸುವುದು ಅನಿವಾರ್ಯವಲ್ಲ. ಆದರೆ, ಇತರೆ ರಾಜ್ಯಗಳು ಆನ್‌ಲೈನ್ ಲಾಟರಿ ನಡೆಸುತ್ತಿರುವುದರಿಂದ ರಾಜ್ಯ ಸರ್ಕಾರವು ಸಹ ಇದನ್ನು ನಡೆಸುವುದು ಅನಿವಾರ್ಯವಾಗಿದೆ. ರಾಜ್ಯದ ಸಂಪನ್ಮೂಲ ಕ್ರೋಢೀಕರಣಕ್ಕೆ ಇದು ಒಂದು ಮೂಲವಾಗಿದೆ.

ಕುಂದಾಪುರ ತಾಲ್ಲೂಕಿನ ಬೈಂದೂರು ಪುರಸಭೆ ಗ್ರಾಮಪಂಚಾಯತ್ ಆಗಿ ಪರಿವರ್ತಿಸುವುದರಿಂದ ಉಂಟಾಗಿರುವ ತೊಂದರೆಗಳು

1332 (864) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಬೈಂದೂರು ಪುರಸಭೆ ರದ್ದಾಗಿ 2 ಗ್ರಾಮ ಪಂಚಾಯತ್ ಆಗಿ ಮಾರ್ಪಟ್ಟಿರುವುದು ಸರಿಯೇ;

ಆ) ರದ್ದಾಗಿರುವ ಪುರಸಭೆಯ ನೌಕರರುಗಳಿಗೆ ವೇತನ ಎಲ್ಲಿಂದ ಸಿಗುತ್ತದೆ;

ಇ) ಗ್ರಾಮ ಪಂಚಾಯತಿಯಿಂದ ವೇತನ ಕೊಡುವುದರಿಂದ ಪಂಚಾಯತಿಗೆ ಸಿಗುವ ಅನುದಾನದಿಂದ ಪಂಚಾಯತ್ ಅಭಿವೃದ್ಧಿ ಕೆಲಸಗಳಿಗೆ ತೊಂದರೆಯಾಗುವುದಿಲ್ಲವೇ;

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಪೌರಾಡಳಿತ ರಾಜ್ಯ ಸಚಿವರು) :

ಅ) ಹೌದು.

ಆ) ಸಂಬಂಧಪಟ್ಟ ಗ್ರಾಮ ಪಂಚಾಯತಿಯಿಂದ ನೀಡಲಾಗುತ್ತದೆ.

ಇ) ಹೌದು.